ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ : ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿ ಪೂರಕ ಕಟ್ಟಡ,
ನೃಪತುಂಗ ರಸ್ತೆ, ಬೆಂಗಳೂರು-560 001.

| ಅ) ಇಲ್ಲಿ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ |
|---|

# 2012-13 ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿ

ಆ) ಜಿಲ್ಲೆ ಹೆಸರು: ಇ) ತಾಲ್ಲೂಕಿನ ಹೆಸರು:

| ಕಛೇರಿ ಉಪಯೋಗಕ್ಕೆ ಮಾತ್ರ | | | | | | | | | | | | |
|---|---|---|---|---|---|---|---|---|---|---|---|---|
| ವರ್ಷ | 1 | 2 | ಜಿಲ್ಲೆ ಕೋಡ್ | | | ತಾಲ್ಲೂಕು ಕೋಡ್ | | | ಕ್ರಮ ಸಂಖ್ಯೆ | | | |

| ವಿದ್ಯಾರ್ಥಿಗಳು/ಪೋಷಕರು ಭರ್ತಿ ಮಾಡತಕ್ಕದ್ದು | | |
|---|---|---|
| 1 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಹೆಸರು (ಪೂರ್ಣಾಕ್ಷರಗಳಲ್ಲಿ) | |
| 2 | ಲಿಂಗ: ಗಂಡು / ಹೆಣ್ಣು | 3) ಗ್ರಾಮೀಣ / ನಗರ   4) **ವಿಕಲಚೇತನರೇ** ಹೌದು / ಇಲ್ಲ |
| 5 | ವಿದ್ಯಾರ್ಥಿ/ವಿದ್ಯಾರ್ಥಿನಿಯ ಜನ್ಮ ದಿನಾಂಕ | D D / M M / Y Y Y Y |
| 6 | ವಿದ್ಯಾರ್ಥಿಯ ಜಾತಿ/ಸಾಮಾಜಿಕವರ್ಗ (√ ಚಿಹ್ನೆಯಿಂದ ಗುರುತಿಸಿ) | ಎಸ್.ಸಿ / ಎಸ್.ಟಿ / ಪ್ರ-1 / 2ಎ / 2ಬಿ / 3ಎ / 3ಬಿ / ಸಾಮಾನ್ಯ |
| 7 | ತಾಯಿಯ ಹೆಸರು | |
| 8 | ತಂದೆಯ ಹೆಸರು | |
| 9 | ಪೂರ್ಣ ವಿಳಾಸ ಗ್ರಾಮ/ಪಟ್ಟಣ<br>ಅಂಚೆ<br>ತಾಲ್ಲೂಕು<br>ಜಿಲ್ಲೆ<br>ದೂರವಾಣಿ ಸಂಖ್ಯೆ | |
| 10 | ವಿದ್ಯಾರ್ಥಿ 5ನೇ ತರಗತಿ ಓದುತ್ತಿರುವ ಶಾಲೆಯ ಹೆಸರು ಮತ್ತು ವಿಳಾಸ | |

ಮೇಲ್ಕಂಡ ಎಲ್ಲಾ ಮಾಹಿತಿಗಳು ನಮಗೆ ತಿಳಿದಿರುವ ಮಟ್ಟಿಗೆ ಸರಿಯಾಗಿವೆ ಎಂದು ಈ ಮೂಲಕ ದೃಢೀಕರಿಸಿದೆ.

ವಿದ್ಯಾರ್ಥಿಯ ಸಹಿ    ಮುಖ್ಯ ಶಿಕ್ಷಕರ ಸಹಿ ಮತ್ತು ಮೊಹರು    ತಂದೆ/ತಾಯಿ/ಪೋಷಕರ ಸಹಿ

———————— ಇಲ್ಲಿ ಕತ್ತರಿಸಿ ————————

## ಪ್ರವೇಶ ಪತ್ರ

| ಇಲ್ಲಿ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ |
|---|

ಎಂಬ ವಿದ್ಯಾರ್ಥಿ/ವಿದ್ಯಾರ್ಥಿನಿಯು ದಿನಾಂಕ: 15.04.2012 ರಂದು ನಡೆಯಲಿರುವ ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗಿದೆ.

ನೊಂದಣಿ ಸಂಖ್ಯೆ:

| 1 | 2 | | | | | | | |
|---|---|---|---|---|---|---|---|---|

| ಪರಿಕ್ಷಾ ಸಮಯ | ಬೆಳಿಗ್ಗೆ : 10.30 ರಿಂದ 12.30 ಗಂಟೆಯವರೆಗೆ |
|---|---|

ಪರೀಕ್ಷಾ ಕೇಂದ್ರ :

ವಿದ್ಯಾರ್ಥಿಯ ಸಹಿ    ಕೊಠಡಿ ಮೇಲ್ವಿಚಾರಕರ ಸಹಿ    ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಿ ಮೊಹರಿನೊಂದಿಗೆ

**ಅರ್ಜಿ ತುಂಬಲು ಕಛೇರಿ ಸಿಬ್ಬಂದಿಗಳಿಗೆ/ವಿದ್ಯಾರ್ಥಿರ್ಗಳಿಗೆ/ಪೋಷಕರಿಗೆ ಸೂಚನೆಗಳು**

**ಎಲ್ಲಾ ಸೂಚನೆಗಳನ್ನು ಸರಿಯಾಗಿ ಓದಿ ನಂತರ ಅರ್ಜಿಯನ್ನು ತುಂಬುವುದು.**

**ಈ ಪರೀಕ್ಷೆಯು 2012-13 ನೇ ಸಾಲಿಗೆ ನಡೆಯುತ್ತಿರುವುದರಿಂದ ವರ್ಷ 12 ಎಂದು ನಮೂದಿಸಲಾಗಿದೆ. ಜಿಲ್ಲೆಯ ಸಂಕೇತವನ್ನು ತುಂಬಲು ಎರಡು ಖಾಲಿ ಮನೆ ನೀಡಿದ್ದು ಅದರಲ್ಲಿ ನಮೂದಿಸುವುದು. ತಾಲ್ಲೂಕು ಸಂಕೇತವನ್ನು ಸಹ ನೀಡಿದ್ದು ಇದನ್ನು ತುಂಬಲು ಎರಡು ಖಾಲಿ ಮನೆಗಳನ್ನು ನೀಡಿದ್ದು ಅದರಲ್ಲಿ ತುಂಬುವುದು. ವಿದ್ಯಾರ್ಥಿಗಳು ತುಂಬಿದ ಅರ್ಜಿಯನ್ನು ನೀಡಿದಾಗ ಪ್ರತಿ ಅರ್ಜಿ ನಮೂನೆ ಸ್ವೀಕರಿಸುವ ಅನುಕ್ರಮದಲ್ಲಿ ಸಂಖ್ಯೆಯನ್ನು ನೀಡುವುದು. ಇದಕ್ಕಾಗಿ ಮೂರು ಖಾಲಿ ಮನೆಗಳನ್ನು ನೀಡಿದೆ.**

ಅ. ವಿದ್ಯಾರ್ಥಿಯು ಇತ್ತೀಚಿನ ಎರಡು ಪಾಸ್ ಪೋರ್ಟ್ ಅಳತೆಯ ಭಾವ ಚಿತ್ರವನ್ನು ಇದಕ್ಕಾಗಿ ನೀಡಿರುವ ಜಾಗದಲ್ಲಿ ಗಮ್ ಬಳಸಿ ಅಂಟಿಸುವುದು. ಪಿನ್ ಮಾಬಾರದು.

ಆ. ರಾಜ್ಯದಲ್ಲಿ 34 ಶೈಕ್ಷಣಿಕ ಜಿಲ್ಲೆಗಳು ಇದ್ದು ನಿಮ್ಮ ಜಿಲ್ಲೆಯ ಹೆಸರನ್ನು ನಮೂದಿಸುವುದು.

ಇ. ರಾಜ್ಯದಲ್ಲಿ 177 ಕಂದಾಯ ತಾಲ್ಲೂಕುಗಳು ಇದ್ದು ನಿಮ್ಮ ತಾಲ್ಲೂಕಿನ ಹೆಸರನ್ನು ನಮೂದಿಸುವುದು.

1) ವಿದ್ಯಾರ್ಥಿಯ ಹೆಸರನ್ನು ಶಾಲೆಯ ದಾಖಲಾತಿಯಲ್ಲಿರುವಂತೆ ಭರ್ತಿ ಮಾಡುವುದು. ಅರ್ಜಿಯನ್ನು ಭರ್ತಿ ಮಾಡಲು ಶಾಲಾ ಮುಖ್ಯೋಪಾಧ್ಯಾಯರ ಸಹಾಯ ಪಡೆಯಬಹುದು.
2) ಗಂಡು ಮತ್ತು ಹೆಣ್ಣು ಎಂದು ಎರಡು ಮನೆಗಳನ್ನು ನೀಡಿದೆ. ವಿದ್ಯಾರ್ಥಿಯು ಯಾವ ಲಿಂಗಕ್ಕೆ ಸೇರಿದ್ದಾರೆಂದು (√) ಹಾಕಿ ಗುರುತು ಮಾಡುವು
3) ಗ್ರಾಮೀಣ ಮತ್ತು ನಗರ ಎಂದು ಎರಡು ಮನೆಗಳನ್ನು ನೀಡಿದೆ. ವಿದ್ಯಾರ್ಥಿಯು ವ್ಯಾಸಂಗ ಮಾಡುತ್ತಿರುವ ಶಾಲೆಯು ಯಾವ ಪ್ರದೇಶಕ್ಕೆ ಸೇರಿದೆ ಎಂಬುದನ್ನು ಪರಿಗಣಿಸಿ (√) ಎಂದು ನಮೂದಿಸುವುದು.
4) ಎರಡು ಮನೆಯನ್ನು ನೀಡಲಾಗಿದ್ದು ವಿದ್ಯಾರ್ಥಿಯು ವಿಕಲಚೇತನರಾಗಿದ್ದಲ್ಲಿ ಹೌದಾದಲ್ಲಿ (√ ) ಎಂದು ಇಲ್ಲವಾದಲ್ಲಿ ( x) ಎಂದು ತುಂಬುವುದು.
5) ಜನ್ಮ ದಿನಾಂಕವನ್ನು ತುಂಬಲು ಎಂಟು ಮನೆಗಳನ್ನು ನೀಡಿದೆ. ಶಾಲೆಯ ದಾಖಲಾತಿ ಪುಸ್ತಕದಲ್ಲಿರುವಂತೆ DD MM YYYY ಮಾದರಿಯಲ್ಲಿ ತುಂಬುವುದು. ಎಂಟು ಮನೆಗಳನ್ನು ನೀಡಿದೆ
6) ಸಾಮಾಜಿಕ ವರ್ಗವನ್ನು ದಾಖಲೆಯ ಆಧಾರದ ಮೇಲೆ ತುಂಬುವುದು. ಅರ್ಜಿಯೊಂದಿಗೆ ಯಾವುದೇ ದಾಖಲೆಗಳನ್ನು ನೀಡುವ ಅವಶ್ಯಕತೆ ಇಲ್ಲ. ಆಯ್ಕೆಗೊಂಡು ಅಭ್ಯರ್ಥಿಗಳು ಶಾಲೆಗೆ ದಾಖಲಾತಿ ಪಡೆಯುವ ಸಮಯದಲ್ಲಿ ಮೂಲದಾಖಲೆಗಳನ್ನು ಒದಗಿಸುವುದು.
7) ಶಾಲಾ ದಾಖಲಾತಿ ಪುಸ್ತಕದಲ್ಲಿರುವಂತೆ ತಾಯಿ ಹೆಸರನ್ನು ತುಂಬುವುದು.
8) ಶಾಲಾ ದಾಖಲಾತಿ ಪುಸ್ತಕದಲ್ಲಿರುವಂತೆ ತಂದೆ ಹೆಸರನ್ನು ತುಂಬುವುದು.
9) ಪೂರ್ಣ ವಿಳಾಸವನ್ನು ದೂರವಾಣಿ ಸಂಖ್ಯೆಯೊಂದಿಗೆ ತುಂಬುವುದು. ಸ್ಥಿರ ದೂರವಾಣಿಯಾದಲ್ಲಿ STD ಕೋಡ್ ನೊಂದಿ ನಮೂದಿಸುವುದು.
10) 5 ನೇ ತರಗತಿ ಓದುತ್ತಿರುವ ಶಾಲೆಯ ವಿಳಾಸ, ಗ್ರಾಮ/ ಜನವಸತಿ ಪ್ರದೇಶ, ತಾಲ್ಲೂಕು ಹಾಗೂ ಜಿಲ್ಲೆಯ ಹೆಸರನ್ನು ತುಂಬುವುದು. ವಿದ್ಯಾರ್ಥಿಯು ವ್ಯಾಸಂಗ ಮಾಡಿರುವ ತಾಲ್ಲೂಕು ಹಾಗೂ ಆದರ್ಶ ವಿದ್ಯಾಲಯ ಇರುವ ತಾಲ್ಲುಕು ಬೇರೆಯಾಗಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

**ಸಾಮಾನ್ಯ ಸೂಚನೆಗಳು:**

- ಆದರ್ಶ ವಿದ್ಯಾಲಯಗಳಿಗೆ ದಾಖಲಾತಿ ಪಡೆಯಲು ನಡೆಸಲಾಗುವ ಆಯ್ಕೆ ಪರೀಕ್ಷೆಗೆ ಅರ್ಜಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ/ಆಯಾ ಬ್ಲಾಕಿನ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಂದ ಉಚಿತವಾಗಿ ಪಡೆಯುವುದು. ಆಯ್ಕೆ ಪರೀಕ್ಷೆಯಲ್ಲಿ ಭಾಗವಹಿಸಲು ಯಾವುದೇ ಶುಲ್ಕವನ್ನು ಪಾವತಿಸಬೇಕಾಗಿರುವುದಿಲ್ಲ.
- ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ:26.03.2012 ನಿಗದಿತ ದಿನಾಂಕದ ನಂತರ ಬಂದ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಆಯ್ಕೆ ಪರೀಕ್ಷೆ ನಡೆಯುವ ದಿನಾಂಕ: 15.04.2012 ರಂದು ಬೆಳ್ಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ.
- ಆಯ್ಕೆ ಪರೀಕ್ಷೆಗೆ 3 ರಿಂದ 5 ನೇ ತರತಿ ಪಠ್ಯವಸ್ತು(Syllabus) ಆಧರಿಸಿ ಆಂಗ್ಲಭಾಷೆ, ಗಣಿತ, ವಿಜ್ಞಾನ ಸಮಾಜ ವಿಜ್ಞಾನ ಮತ್ತು ಸಾಮಾನ್ಯ ವಿಜ್ಞಾನ ಆಧರಿಸಿದ ವಸ್ತುನಿಷ್ಠ ಪ್ರಶ್ನೆಗಳಿರುತ್ತವೆ. ಹಾಗೂ ಪ್ರಶ್ನೆಪತ್ರಿಕೆ ಆಂಗ್ಲ ಹಾಗೂ ಕನ್ನಡ ಮಾಧ್ಯಮದಲ್ಲಿರುತ್ತದೆ
- ಆಯ್ಕೆ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳನ್ನಾಧರಿಸಿ ರಾಜ್ಯದ ರೋಸ್ಟರ್ ನಿಯಮಾನುಸಾರ ತಾಲ್ಲೂಕು ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಹಾಗೂ ಪ್ರತಿ ಶಾಲೆಗೆ 80 ಮಕ್ಕಳನ್ನು ದಾಖಲು ಮಾಡಿಕೊಳ್ಳಲಾಗುವುದು.
- ಆದರ್ಶ ವಿದ್ಯಾಲಯಗಳಿಗೆ ದಾಖಲಾತಿಯು ಆಯಾ ತಾಲೂಕಿನ ಮಕ್ಕಳಿಗೆ ಮಾತ್ರ ಅರ್ಹತೆ.
- ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಾಲೆಯ ವಿದ್ಯಾರ್ಥಿಗಳು ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
- ಅರ್ಜಿರ್ಯನ್ನು www.ssakarnataka.gov.in ಹಾಗೂ www.schooleducation.kar.nic.in ನಲ್ಲಿ download ಮಾಡಿಕೊಳ್ಳಬಹುದು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ(ಬಿ.ಇ.ಓ.) ಅಥವಾ ಆದರ್ಶ ವಿದ್ಯಾಲಯಗಳಲ್ಲಿ ಪಡೆಯಬಹುದು.

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ-ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ
ನೃಪತುಂಗರಸ್ತೆ, ಬೆಂಗಳೂರು-560001

## ಮಾದರಿ ಶಾಲೆಗಳು (ಆದರ್ಶ ವಿದ್ಯಾಲಯ) ಶಾಲಾ ಪರಿಚಯ (ಪ್ರಾಸ್ಪೆಕ್ಟಸ್ )-2012

ಪ್ರೌಢ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಉತ್ತಮ ಗುಣಮಟ್ಟದ ಅವಕಾಶ, ಸೌಕರ್ಯ ಮತ್ತು ಲಭ್ಯತೆಯನ್ನು ಎಲ್ಲಾ ಯುವಜನಾಂಗಕ್ಕೆ ಪೂರೈಸಲು ಸರ್ಕಾರ ಗಳು ಬದ್ಧವಾಗಿವೆ. ಇದಕ್ಕಾಗಿ ಕೇಂದ್ರ ಸರ್ಕಾರವು ದೇಶದಾದ್ಯಂತ ಉತ್ತಮ ಗುಣಮಟ್ಟದ ಶಾಲೆಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ಶೈಕ್ಷಣಿಕವಾಗಿ ಹಿಂದುಳಿದ 74 ತಾಲ್ಲೂಕುಗಳಲ್ಲಿ ಮಾದರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಅವುಗಳಿಗೆ ಆದರ್ಶ ವಿದ್ಯಾಲಯ ಎಂದು ಹೆಸರಿಸಲಾಗಿದೆ. ಗ್ರಾಮೀಣ ಪ್ರದೇಶದ ಪ್ರತಿಭಾನ್ವಿತ ವಿದ್ಯಾರ್ಥಿ ಗಳಿಗೆ ಉತ್ತಮ ಗುಣಮಟ್ಟದ ಆಂಗ್ಲಮಾಧ್ಯಮ ಶಿಕ್ಷಣ ಒದಗಿಸುವುದು. ಈ ಪ್ರಯತ್ನದ ಉದ್ದೇಶ.

**ನಮ್ಮ ಕನಸು :-**

"ವಿದ್ಯಾರ್ಥಿಗಳಿಗೆ ಸಂಪೂರ್ಣವಾದ ಗುಣಮಟ್ಟದ ಶಿಕ್ಷಣವನ್ನು ನೀಡಿ ಉತ್ಕೃಷ್ಟವಾದ ವೈಯುಕ್ತಿಕ ಮತ್ತು ಶೈಕ್ಷಣಿಕ ಗುರಿಯನ್ನು ಸಾಧಿಸಲು / ತಲುಪಲು ಸಮರ್ಥರನ್ನಾಗಿ ಮಾಡುವುದು ಹಾಗೂ ಈ ಶಾಲೆಯನ್ನು ಅತ್ಯವಶ್ಯ ಮೌಲ್ಯಗಳುಳ್ಳ ಮತ್ತು ಸಾಧಿಸಬಹುದಾದ ಗುರಿಗಳ ಆಧಾರದಲ್ಲಿ ಉತ್ತಮ ಕಲಿಕೆಯ ಕೇಂದ್ರವನ್ನಾಗಿ ಮಾಡುವುದು."

**ನಮ್ಮ ಧ್ಯೇಯ:-**

"ಜಾತಿ, ವರ್ಗ, ಧರ್ಮ, ಇವುಗಳ ಯಾವುದೇ ತಾರತಮ್ಯವಿಲ್ಲದೆ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡಿ ಅವರನ್ನು ಜವಾಬ್ದಾರಿಯುಳ್ಳ ಸ್ವಸಾಮರ್ಥ್ಯ ಮತ್ತು ಏಕತೆಯ ಮನೋಭಾವವನ್ನು ಹೊಂದಿದ ಆದರ್ಶ ನಾಗರೀಕರನ್ನಾಗಿ ಮಾಡುವುದು.

### 2012 -13 ನೇ ಸಾಲಿನಲ್ಲಿ ಆದರ್ಶ ವಿದ್ಯಾಲಯಗಳ ವಿಶೇಷತೆಗಳು:-

- ಆದರ್ಶ ವಿದ್ಯಾಲಯಗಳ ಮೂಲಭೂತ ಸಂರಚನೆಗಳು ಮತ್ತು ಸೌಕರ್ಯಗಳು ಕೇಂದ್ರಿಯ ವಿದ್ಯಾಲಯಗಳ ಮಾದರಿಯ ಲ್ಲಿರುತ್ತವೆ. ಸೂಕ್ತವಾದ ಪಠ್ಯಕ್ರಮ, ವಿದ್ಯಾರ್ಥಿ/ಶಿಕ್ಷಕರ ಅನುಪಾತ, ಮಾಹಿತಿ, ಸಂವಹನ, ತಂತ್ರಜ್ಞಾನದ ಬಳಕೆ, ಸಂಪೂರ್ಣ ಶೈಕ್ಷಣಿಕ ಪರಿಸರ ಮತ್ತು ವಿದ್ಯಾರ್ಥಿಗಳ ಕಲಿಕೆ (ಔಟ್ ಪುಟ್) ಗಳನ್ನು ಈ ಶಾಲೆಗಳು ಹೊಂದಿರುತ್ತವೆ.
- ಈ ಶಾಲೆಗಳು 2010-11 ನೇ ಸಾಲಿನಿಂದ 6 ನೇ ತರಗತಿ ಮತ್ತು ತಲಾ 2 ವಿಭಾಗಗಳೊಂದಿಗೆ ಆರಂಭವಾಗಿವೆ. ಬೋಧನಾ ಮಾಧ್ಯಮವು ಇಂಗ್ಲೀಷ್ ಆಗಿದ್ದು ರಾಜ್ಯದ ಪಠ್ಯಕ್ರಮ ಅಳವಡಿಸಿದೆ.
- 2012-13 ನೇ ಸಾಲಿನಲ್ಲಿ 6,7 ಮತ್ತು 8 ನೇ ತರಗತಿಗಳು ನಡೆಯಲಿದೆ. 6 ನೇ ತರಗತಿಗೆ ಗರಿಷ್ಠ 80 ಮಕ್ಕಳನ್ನು ದಾಖಲು ಮಾಡುಕೊಳ್ಳಲಾಗುತ್ತದೆ.
- ಆಂಗ್ಲಮಾಧ್ಯಮದಲ್ಲಿ ಬೋಧನೆ ಮಾಡಲು ಸಾಮರ್ಥ್ಯವಿರುವ ಮತ್ತು ಪದವಿ ಹಾಗೂ ಸ್ನಾತಕೋತ್ತರ ಪದವಿ ಯೊಂದಿಗೆ ತರಬೇತಿ ಪಡೆದ ಶಿಕ್ಷಕರನ್ನು ಒದಗಿಸಲಾಗುತ್ತದೆ. ಉತ್ತಮ ಭೌತಿಕ ಸೌಕರ್ಯಗಳಾದ ತರಗತಿ ಕೊಠಡಿಗಳು , ಪ್ರಯೋಗಾಲಯ, ಕಂಪ್ಯೂಟರ್ ಕೊಠಡಿ, ಗ್ರಂಥಾಲಯ, ಶೌಚಾಲಯ, ಆಟದ ಮೈದಾನಗಳನ್ನು ಹೊಂದಿರುವ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರದ ಅನುಮೋದನೆ ದೊರತಿದ್ದು, ಶೀಘ್ರವೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.
- ಕನಿಷ್ಠ 5 ಕೊಠಡಿಗಳು. ಕುಡಿಯುವ ನೀರು, ಶೌಚಾಲಯ, ಆಟದ ಮೈದಾನ ಮುಂತಾದ ಮೂಲ ಸೌಕರ್ಯ ಇರುವ ಶಾಲೆಯನ್ನು ಆಯ್ದುಕೊಂಡು ಆದರ್ಶ ವಿದ್ಯಾಲಗಳನ್ನು ಆರಂಭಿಸಲಾಗಿದೆ. ಕಾಮಗಾರಿ ಪೂರ್ಣಗೊಳ್ಳುವವರೆಗೆ ಈ ಶಾಲೆಯಲ್ಲಿಯೇ ಅವಶ್ಯಕ ವ್ಯವಸ್ಥೆ ಪೂರೈಸಲು ಕ್ರಮ ಕೈಗೊಳ್ಳಲಾಗುವುದು.
- ಸರ್ಕಾರಿ ಶಾಲೆಗಳಿಗೆ ಲಭ್ಯವಿರುವ ಉಚಿತ ಪಠ್ಯ ಪುಸ್ತಕ , ಸಮವಸ್ತ್ರ, ಮಧ್ಯಾಹ್ನದ ಉಪಹಾರ ಇವುಗಳ ಜೊತೆಗೆ ಶಾಲಾ ಡೈರಿ ಮೊದಲಾದ ಸವಲತ್ತುಗಳು ಈ ಶಾಲೆಗಳಲ್ಲಿ ದೊರೆಯುತ್ತದೆ.

- ರಾಜ್ಯದಲ್ಲಿರುವ 202 ಶೈಕ್ಷಣಿಕ ಬ್ಲಾಕ್ ಗಳ ಪೈಕಿ , 74 ಶೈಕ್ಷಣಿಕ ವಾಗಿ ಹಿಂದುಳಿದಿದ್ದು ಅಲ್ಲಿ ಮಾತ್ರ ಆದರ್ಶ ವಿದ್ಯಾಲಯಗಳನ್ನು ಆರಂಭಿಸಲಾಗಿದೆ.
- ಆದರ್ಶ ವಿದ್ಯಾಲಯಗಳಿಗೆ ಸಾಮಾನ್ಯ ಪರೀಕ್ಷೆ ಮೂಲಕ ರಾಜ್ಯದ ರೋಸ್ಟರ್ ನಿಯಮಗಳಿಗೆ ಅನುಗುಣವಾಗಿ ದಾಖಲಾತಿ ಮಾಡಿಕೊಳ್ಳುವುದು. ಆಯ್ಕೆಪರೀಕ್ಷೆ ಆಯಾ ಕೇಂದ್ರದಲ್ಲಿ ನಡೆಯುವುದು. ಆಯಾ ಬ್ಲಾಕ್ ನ ಮಕ್ಕಳಿಗೆ ಮಾತ್ರ ಪ್ರವೇಶ ಪರೀಕ್ಷೆಗೆ ಅವಕಾಶ.

## ಪರೀಕ್ಷಾ ವೇಳಾಪಟ್ಟಿ:-

| | | |
|---|---|---|
| 1 | ಪ್ರಚಾರ ಕಾರ್ಯ (ಬ್ಲಾಕ್ ಹಂತದಲ್ಲಿ) - ನಿರಂತರ ಪ್ರಚಾರ | 12-03-2012 ಇಂದ ಪರೀಕ್ಷೆ ಹಿಂದಿನ ದಿನದವರೆಗೆ |
| 2 | ಪ್ರಚಾರ ಕಾರ್ಯ(ಬ್ಲಾಕ್ ಹಂತದಲ್ಲಿ)- ವಿಶೇಷ ಪ್ರಚಾರ | 12-03-2012 ಇಂದ 24-03-2012 |
| 3 | ಅರ್ಜಿ ವಿತರಣೆ<br>(ಆಯಾ ಆದರ್ಶ ವಿದ್ಯಾಲಯಗಳು/ಬಿಇಓ ಕಛೇರಿಗಳು) | 12-03-2012 ಇಂದ 24-03-2012 |
| 4 | ಭರ್ತಿ ಮಾಡಿದ ಅರ್ಜಿಗಳನ್ನು ಬಿಇಓ ಕಛೇರಿ ಗೆಸಲ್ಲಿಸಲು ಕೊನೆಯ ದಿನಾಂಕ | 26-03-2012 ರಂದು ಸಂಜೆ 5 ರವರೆಗೆ |
| 5 | ಸಾಮಾನ್ಯ ಪ್ರವೇಶ ಪರೀಕ್ಷೆ (ಆಯಾ ಬ್ಲಾಕ್ ಕೇಂದ್ರ ಗಳಲ್ಲಿ) | 15-04-2012 ರಂದು ಬೆಳಿಗ್ಗೆ 10.30 ರಿಂದ 12.30 |
| 6 | ಉತ್ತರ ಪತ್ರಿಕೆಗಳ ಮೌಲ್ಯಮಾಪನ (ಡಯಟ್ ಹಂತ) | 17-04-2012 ಇಂದ 19-04-2012 |
| 7 | ಫಲಿತಾಂಶ ಪ್ರಕಟಣೆ ಮತ್ತು ಅರ್ಹತೆಯಾಧಾರಿತ ಆಯ್ಕೆಪಟ್ಟಿ ಪ್ರಕಟಣೆ (ರಾಜ್ಯ ಹಂತ) | 25-04-2012 ರಂದು |
| 8 | ದಾಖಲಾತಿ ಪ್ರಕ್ರಿಯೆ (ಶಾಲಾ ಹಂತ) | 21-05-2012 ಇಂದ 10-06-2012 |
| 9 | ಶಾಲೆ ಪ್ರಾರಂಭ | 11-06-2012 ರಂದು |

- ಅರ್ಜಿಗಳನ್ನು ಆಯಾ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಂದ ಅಥವಾ ಆಯಾ ತಾಲ್ಲೂಕಿನ ಬಿಇಓ ಕಛೇರಿಗಳಲ್ಲಿ ಪಡೆಯಬಹುದು. ಈ ಮುಂದೆ ನಮೂದಿಸಿರುವ ವೆಬ್ ಸೈಟ್ ಗಳಿಂದಲೂ ಡೌನ್ ಲೋಡ್ ಮಾಡಿ ಮುದ್ರಿಸಿಕೊಳ್ಳಬಹುದು. www.ssakarnataka.gov.in ಮತ್ತು www.schooleducation.kar.nic.in
- ಆಯಾ ಪರೀಕ್ಷೆಯಲ್ಲಿ 3 ರಿಂದ 5 ನೇ ತರಗತಿ ಪಠ್ಯಪುಸ್ತಕ ಆಧರಿಸಿ ಆಂಗ್ಲ ಭಾಷೆ, (20%) ಗಣಿತ (20%) ವಿಜ್ಞಾನ (20%) ಸಮಾಜ ವಿಜ್ಞಾನ (20%) ಮತ್ತು ಸಾಮಾನ್ಯ ಜ್ಞಾನ (20%) ಗಳನ್ನು ಪರಿಗಣಿಸಲಾಗುವುದು.
- ಪ್ರಶ್ನೆಪತ್ರಿಕೆಯ ವಸ್ತುನಿಷ್ಠ (ಅಬ್ಜೆಕ್ಟೀವ್) ಪ್ರಶ್ನೆಗಳನ್ನು ಹೊಂದಿದ್ದು ಆಂಗ್ಲ ಮತ್ತು ಕನ್ನಡ ಮಾಧ್ಯಮದಲ್ಲಿರುತ್ತವೆ.
- ಆಯ್ಕೆ ಪರೀಕ್ಷೆಗೆ ಒಂದೇ ಪ್ರಶ್ನೆಪತ್ರಿಕೆ ಇದ್ದು ಪರೀಕ್ಷೆ ಅವಧಿ 2 ಗಂಟೆ ಆಗಿರುತ್ತದೆ. ಪರೀಕ್ಷಾ ದಿನದಂದು ಬೆಳಗಿನ 10.30 ರಿಂದ 12.30 ರವರೆಗೆ ಪರೀಕ್ಷೆ ನಡೆಯಲಿದೆ. ಪರೀಕ್ಷಾ ಕೇಂದ್ರ, ಆಯಾ ತಾಲ್ಲೂಕು ಕೇಂದ್ರದಲ್ಲಿ ಇದ್ದು ಕನಿಷ್ಠ 250-300 ಮಕ್ಕಳಿಗೆ ಒಂದು ಕೇಂದ್ರ ಇರುತ್ತದೆ.
- ಆಯ್ಕೆ ಪರೀಕ್ಷೆಗಳಿಗೆ ಪೂರಕವಾದ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಮಾದರಿಗಳನ್ನು ವೆಬ್ ಸೈಟ್ ನಲ್ಲಿ ಪಡೆದುಕೊಳ್ಳಲು ಅವಕಾಶವಿದೆ.